ಆ) ಈ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ದೊಡ್ಡಬಳ್ಳಾಪುರ ತಾಲ್ಲೂಕಿನ ಮೇಲೆ ಮಲತಾಯಿ ಧೋರಣೆ ನೀತಿಯನ್ನು ಅನುಸರಿಸುತ್ತಿದೆಯೇ,

ಇ) ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಮಂಜೂರಾತಿ ನೀಡಿರುವ ಹೊಸ ಪ್ರೌಢಶಾಲೆಗಳಲ್ಲಿ ಸರ್ಕಾರದ ಆದೇಶ ದಿನಾಂಕ 21 7 2006ರಂದು ರಾಮನಗರ, ಮಾಗಡಿ, ದೇವನಹಳ್ಳಿ ಮತ್ತು ಕನಕಪುರ ತಾಲ್ಲೂಕುಗಳಿಗೆ ಮಾತ್ರ ಹೊಸ ಪ್ರೌಢಶಾಲೆಗಳನ್ನು ಮಂಜೂರು ಮಾಡಿ ದೊಡ್ಡಬಳ್ಳಾಪುರ ತಾಲ್ಲೂಕನ್ನು ನಿರ್ಲಕ್ಷಿಸಿರುವುದು ಸರಿಯೇ, ಇದಕ್ಕೆ ಕಾರಣಗಳೇನು?

ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಆಯವ್ಯಯದಲ್ಲಿನ ಅವಕಾಶ ಹಾಗೂ ಶೈಕ್ಷಣಿಕ ಅಗತ್ಯತೆ, ಇವುಗಳನ್ನು ಗಮನದಲ್ಲಿಟ್ಟುಕೊಂಡು, ಹೊಸ ಸರ್ಕಾರಿ ಪ್ರೌಢಶಾಲೆಗಳನ್ನು ಹಂತ ಹಂತವಾಗಿ ಮಂಜೂರು ಮಾಡಲಾಗುತ್ತಿದೆ

ಆ) ಇಲ್ಲ

ಇ) ದಿನಾಂಕ 30 9 2006ರ ಆದೇಶ ಸಂಖ್ಯೆ ಇಡಿ 54 ಎಸ್‌ಇಎಸ್ 2006ರಲ್ಲಿ 2006–07ನೇ ಸಾಲಿನಲ್ಲಿ ದೊಡ್ಡಬಳ್ಳಾಪುರ ನಗರಕ್ಕೆ ಪ್ರೌಢಶಾಲೆ ಮಂಜೂರಾಗಿದೆ ಆದ್ದರಿಂದ ದೊಡ್ಡಬಳ್ಳಾಪುರ ತಾಲ್ಲೂಕು ನಿರ್ಲಕ್ಷೆಯಾಗಿರುವುದಿಲ್ಲ

520(863) ಶ್ರೀ ಪದ್ಮನಾಭ ಕೊಟ್ಟಾರಿ ಕೆ (ವಿಟ್ಲ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ರಾಜ್ಯದಲ್ಲಿ ಕನ್ನಡ ಮಾಧ್ಯಮ ಶಾಲೆಗಳೆಂದು ಸರ್ಕಾರದ ಅನುಮತಿ ಪಡೆದುಕೊಂಡು ಆಂಗ್ಲ ಮಾಧ್ಯಮದಲ್ಲಿ ಶಿಕ್ಷಣ ನೀಡುತ್ತಿರುವ ಒಟ್ಟು ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಸಂಖ್ಯೆ ಎಷ್ಟು,

ಆ) ಅಂಥವುಗಳ ಮೇಲೆ ಸರ್ಕಾರ ಜರುಗಿಸಿದ ಕ್ರಮಗಳೇನು, ಇವುಗಳನ್ನು ಸಕ್ರಮೀಕರಿಸಿರುವ ಯೋಜನೆ ಸರ್ಕಾರದ ಮುಂದಿದೆಯೇ,

ಇ) ಇದ್ದಲ್ಲಿ, ಬಂಟ್ವಾಳ ತಾಲ್ಲೂಕಿನಲ್ಲಿರುವ ಅನುಮತಿ ಪಡೆದ ಮತ್ತು ಪಡೆಯದೇ ಇರುವ ಶಾಲೆಗಳ ಸಂಖ್ಯೆ ಎಷ್ಟು, (ಕನ್ನಡ ಮತ್ತು ಆಂಗ್ಲ ಮಾಧ್ಯಮ ಶಾಲೆಗಳ ಸಂಖ್ಯೆ ನೀಡುವುದು)?

ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) 1994 ರಿಂದ ಈವರೆಗೆ ರಾಜ್ಯದಲ್ಲಿ ಕನ್ನಡ ಮಾಧ್ಯಮದಲ್ಲಿ ಅನುಮತಿ ಪಡೆದು, 7211 ಶಾಲೆಗಳ ನಡೆಯುತ್ತಿದ್ದು, ಇವುಗಳಲ್ಲಿ 2698 ಶಾಲೆಗಳು ಆಂಗ್ಲ ಮಾಧ್ಯಮದಲ್ಲಿ ನಡೆಸುತ್ತಿದ್ದು, ಉಲ್ಲಂಘನೆ ಬಗ್ಗೆ ಇವುಗಳಿಗೆ ನೋಟೀಸ್ ನೀಡಲಾಗಿದ್ದು, ಅದರಲ್ಲಿ 2215 ಶಾಲೆಗಳ ಮಾನ್ಯತೆ ಹಿಂದಕ್ಕೆ ಪಡೆಯಲಾಗಿದೆ 6ನೇ ತರಗತಿಯಿಂದ ಆಂಗ್ಲ ಮಾಧ್ಯಮದಲ್ಲಿ ಕಲಿಸಲು ಆಸ್ಪದ ಇರುವುದರಿಂದ ಪ್ರೌಢಶಾಲೆಗಳು ಯಾವುದು ಇರುವುದಿಲ್ಲ

ಆ) ಮೇಲೆ ಹೇಳಿದಂತೆ, 2215 ಶಾಲೆಗಳ ಮಾನ್ಯತೆ ರದ್ದುಪಡಿಸಲಾಗಿದೆ ಆದರೆ, ಶೈಕ್ಷಣಿಕ ವರ್ಷದ ಮಧ್ಯಭಾಗದಲ್ಲಿ ಶಾಲೆಯನ್ನು ಮುಚ್ಚಿಸಿದರೆ ವಿದ್ಯಾರ್ಥಿಗಳಿಗೆ ತೊಂದರೆಯಾಗುವುದರಿಂದ ಭಾಷಾ ನೀತಿ ಉಲ್ಲಂಘಿಸಿರುವ ಶಾಲೆಗಳ ಮಾನ್ಯತೆಯನ್ನು ರದ್ದುಪಡಿಸಿದ ಆದೇಶಗಳನ್ನು ಹಿಂಪಡೆಯದೇ, ದಿ 6.11.2006ರ ಸರ್ಕಾರದ ಆದೇಶ ಸಂಖ್ಯೆ ಇಡಿ 203 ಪಿಜಿಸಿ 2006ರನ್ವಯ ಏಪ್ರಿಲ್ 10, 2007ರವರೆಗೆ ಆ ರದ್ಧತಿ ಆದೇಶಗಳ ಜಾರಿಗೊಳಿಸುವಿಕೆಯನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಗಿದೆ

ಇವುಗಳನ್ನು ಸಕ್ರಮಿಸುವ ಯೋಜನೆ ಸರ್ಕಾರದ ಮುಂದಿಲ್ಲ

ಇ) ಬಂಟ್ವಾಳ ತಾಲ್ಲೂಕಿನಲ್ಲಿ ಅನುಮತಿ ಪಡೆಯದೇ ಇರುವ ಯಾವುದೇ ಶಾಲೆಗಳು ಇರುವುದಿಲ್ಲ ಅನುಮತಿ ಪಡೆದು ನಡೆಸುತ್ತಿರುವ ಶಾಲೆಗಳ ವಿವರ ಈ ಕೆಳಗಿನಂತಿದೆ

	ಕಿರಿಯ ಪ್ರಾಥಮಿಕ ಶಾಲೆ		ಹಿರಿಯ ಪ್ರಾಥಮಿಕ ಶಾಲೆ		ಪ್ರೌಢ ಶಾಲೆ	
	ಕನ್ನಡ	ಇಂಗ್ಲೀಷ್	ಕನ್ನಡ	ಇಂಗ್ಲೀಷ್	ಕನ್ನಡ	ಇಂಗ್ಲೀಷ್
ಅನುದಾನಿತ	3	–	53	–	13	–

ಅನುದಾನ ರಹಿತ	19	1	4	11	9	9
ಒಟ್ಟು	**22**	**1**	**57**	**11**	**22**	**9**

521(864) ಶ್ರೀ ಪದ್ಮನಾಭ ಕೊಟ್ಟಾರಿ ಕೆ (ವಿಟ್ಲ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ರಾಜ್ಯದಲ್ಲಿ ಸರ್ಕಾರಿ ಶಾಲಾ ಮಕ್ಕಳಿಗೆ ನೀಡುತ್ತಿರುವ ಬಿಸಿಯೂಟ, ಸಮವಸ್ತ್ರ ಮತ್ತು ಉಚಿತ ಪುಸ್ತಕ ನೀಡಿಕೆಯ ಯೋಜನೆಯ ಸೌಲಭ್ಯವನ್ನು ಅನುದಾನಿತ ಶಾಲಾ ಮಕ್ಕಳಿಗೂ ವಿಸ್ತರಿಸುವುದು ಸರಕಾರದ ಗಮನದಲ್ಲಿದೆಯೇ,

ಆ) ಇದ್ದಲ್ಲಿ, ಸರಕಾರಿ ಶಾಲೆಗಳು ಇಲ್ಲದ ಹಾಗೂ ಉತ್ತಮ ಶೈಕ್ಷಣಿಕ ಸೌಲಭ್ಯವನ್ನು ನೀಡಿಕೊಂಡು ಬರುತ್ತಿರುವ ಅನುದಾನಿತ ಶಾಲಾ ಮಕ್ಕಳಿಗೂ ಎಲ್ಲಾ ಸೌಲಭ್ಯಗಳನ್ನು ವಿಸ್ತರಿಸುವ ಮೂಲಕ ಶಾಲಾ ಮಕ್ಕಳಲ್ಲಿ ಬೇದಭಾವಗಳನ್ನು ಹೋಗಲಾಡಿಸಲು ಶೀಘ್ರ ನಿರ್ಧಾರವನ್ನು ಸರಕಾರ ಕೈಗೊಳ್ಳುವುದೇ?

ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ದಿ 19 2004 ರಿಂದ ಸರ್ಕಾರಿ ಅನುದಾನಿತ 1 ರಿಂದ 5ರ ತರಗತಿಯ ಶಾಲಾ ಮಕ್ಕಳಿಗೆ ಹಾಗೂ ದಿ 1 10 2004 ರಿಂದ ಸರ್ಕಾರಿ ಅನುದಾನಿತ 6 ಮತ್ತು 7ನೇ ತರಗತಿಯ ಶಾಲಾ ಮಕ್ಕಳಿಗೆ ಬಿಸಿಯೂಟ ಯೋಜನೆಯನ್ನು ವಿಸ್ತರಿಸಲಾಗಿರುತ್ತದೆ

ಆ) ಪ್ರಶ್ನೆ ಉದ್ಭವಿಸುವುದಿಲ್ಲ

522(865) ಶ್ರೀ ಕೆ ಪದ್ಮನಾಭ ಕೊಟ್ಟಾರಿ (ವಿಟ್ಲ) ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಆಶ್ರಯ ಯೋಜನೆಯಡಿಯಲ್ಲಿ ಫಲಾನುಭವಿಗಳ ಆಯ್ಕೆಯಲ್ಲಿ ಬಳಸಲಾಗುವ ಮಾನದಂಡಗಳೇನು, ಮೊದಲು ಬಳಸುತ್ತಿದ್ದ 14 ಅಂಕಗಳಾಧಾರಿತ ಮಾನದಂಡಗಳನ್ನು ಕೈಬಿಡಲಾಗಿದೆಯೇ,